# ಮಳೆ ಬಂದಿದೆ

ರವಿರಾಜ ಹಾಲಂಬಿ

ಕಲೆ: ಸಂತೋಷ್ ಸಸಿಹಿತ್ಲು

ಬಂದಿದೆ ಮಳೆ
ಪ್ರಮಾಣ ಎಷ್ಟು?

ಮಾಡಿಂದ ನೀರು
ತೊಟ್ಟಿಕ್ಕುವಷ್ಟು
ಮಣ್ಣಿನ ಧೂಳು
ಅಡಗುವಷ್ಟು

ನಾಲೆಯಲಿ ಜಲ
ಹರಿಯುವಷ್ಟು
ಕೆರೆ ಬಾವಿಗಳು
ತುಳುಕುವಷ್ಟು

ಹಳ್ಳ ಕೊಳ್ಳದಲಿ
ಭೋರ್ಗರೆವಷ್ಟು
ನದಿಗಳು ಉಬ್ಬಿ
ನೆರೆ ಬರುವಷ್ಟು

ಮಕ್ಕಳ ಅಂಗಿ
ನೆನೆಯುವಷ್ಟು
ಶಾಲೆ ಕಾಲೇಜಿಗೆ
ರಜಾ ಸಿಗುವಷ್ಟು



## ಕುಂಚ ಪ್ರಪಂಚ



**ಸಿ.ಜಿ. ಮನೋಜ್**
5ನೇ ತರಗತಿ,
ಸಿದ್ಧಗಂಗಾ ಶಾಲೆ, ದಾವಣಗೆರೆ





**ನವ್ಯಾ ಆರ್.**
7ನೇ ತರಗತಿ,
ಇಂಡಿಯನ್ ಇಂಟರ್ ನ್ಯಾಷನಲ್ ಸ್ಕೂಲ್,
ಚಿತ್ರದುರ್ಗ

